VIJAYAKUMAR KANNUR
Digitally signed by VIJAYAKUMAR KANNUR
Date: 2026.03.25 10:26:35 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 24.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ MAH ವಕೀಲರಿಂದ :**

ನಾನು ಪೆಟ್ಲೂರು ಗ್ರಾಮದ ನಿವಾಸಿಯಾಗಿರುವೆನು. ನನಗೆ ಪ್ರತಿವಾದಿ 1 ರಿಂದ 3 ರವರ ಪರಿಚಯ ಇರುವುದು. ಈ ಪ್ರತಿವಾದಿಯರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಸಂಪೂರ್ಣವಾಗಿ ಪ್ರತಿವಾದಿ 1 ರವರೇ ಮಾಹಿತಿ ನೀಡಿರುವರು ಎಂದರೆ ಸರಿಯಲ್ಲ. ನನಗೆ ವಾದಿಯ ಪರಿಚಯ ಇರುವುದಿಲ್ಲ. ಭೀಮಶಿ ಅಂಬಿಗೇರ ಎಂಬ ವ್ಯಕ್ತಿ ಪೆಟ್ಲೂರು ಗ್ರಾಮಕ್ಕೆ ಬರುವುದರಿಂದ ಆತನ ಪರಿಚಯ ನನಗೆ ಆಗಿರುವುದು. ವಾದಿಯು ಈ ದಾವೆಯನ್ನು ಈ ಪ್ರತಿವಾದಿಯರ ವಿರುದ್ಧ ದಾಖಲು ಮಾಡಿರುವನು.

2. ಈ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದು. ಕೈಗಡ ಪತ್ರದ ದಾಖಲಾತಿಯ ಬಗ್ಗೆ ನನಗೆ ಮಾಹಿತಿ ಇರುವುದು. ಬೇರೆ ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ 1 ರವರು ಒಬ್ಬೊರಿಗೊಬ್ಬರು ಪರಿಚಯಸ್ಥರು ಎಂದರೆ ಸರಿಯಲ್ಲ. ದಾವಾ ಆಸ್ತಿ ಪೆಟ್ಲೂರು ಗ್ರಾಮದಲ್ಲಿ ಇರುವುದು. ಪ್ರತಿವಾದಿ 1 ಮತ್ತು 2 ರವರು ಕೂಡಿಕೊಂಡು ದಾವಾ ಆಸ್ತಿಯನ್ನು ಮಾರಾಟ ಮಾಡುವುದಾಗಿ ಎಂದು ಹೇಳಿ ವಾದಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುವರು ಎಂದರೆ ಸರಿಯಲ್ಲ, ಆದರೆ ಕೈಗಡ ಹಣವನ್ನು ಅವರು ಪಡೆದುಕೊಂಡಿರುವರು. ಈ ವ್ಯವಹಾರ ಆಗುವ ಸಮಯದಲ್ಲಿ ನಾನು ಸಹ ಹಾಜರಿದ್ದು, ಆದ್ದರಿಂದ ಇವರ ಮಧ್ಯೆ ಕೇವಲ ಕೈಗಡ ಹಣದ ವ್ಯವಹಾರ ಆದ ಬಗ್ಗೆ ವೈಯಕ್ತಿಕವಾಗಿ ನನಗೆ ಮಾಹಿತಿ ಇರುವುದು. ಈ ಕೈಗಡ ಪತ್ರ ಬರೆಯುವ ಸಮಯದಲ್ಲಿ ನಾನು ಹಾಜರಿರಲಿಲ್ಲ.ಈ ಕೈಗಡ ಪತ್ರವನ್ನು ಪ್ರತಿವಾದಿ 1 ರವರು ನನಗೆ ತೋರಿಸಿರುವರು. ಈ ಕೈಗಡ ಪತ್ರದಲ್ಲಿ ರೂ. 5 ಲಕ್ಷ ಹಣ ಅಂತ ನಮೂದು ಮಾಡಿರುವರು. ಈ ಕೈಗಡ ಪತ್ರವನ್ನು 2016 ರಲ್ಲಿ ಬರೆದಿರುವರು. ಅದನ್ನು ಯಾರು ಬರೆದಿರುವ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದರಲ್ಲಿ ಎಷ್ಟು ಅವಧಿಯವರೆಗೆ

ಅಂತ ಬರೆದಿರುವರು ಎಂದರೆ 2 ವರ್ಷ ಅಂತ ಬರೆದಿರುವರು.

3. ವಾದಿ, ಪ್ರತಿವಾದಿ 1 ರವರಿಗೆ ರೂ. 5 ಲಕ್ಷ ಹಣ ನೀಡುವ ಸಮಯದಲ್ಲಿ ನಾನು ಹಾಜರಿದ್ದೇನು. ಈ ಹಣವನ್ನು ನನ್ನ ಮನೆಯಲ್ಲೇ ನೀಡಿರುವರು. ಈ ವ್ಯವಹಾರದ ಸಮಯದಲ್ಲಿ ಹಿರಿಯರು ಅಂತ ಭೀಮಶಿ ಅಂಬಿಗೇರ, ವಿಠಲ ಪೂಜಾರಿ, ವಾದಿಯ ಪರವಾಗಿ ಇಬ್ಬರು ಬೇರೆ ವ್ಯಕ್ತಿಗಳು ಸಹ ಬಂದಿದ್ದರು, ಅವರ ಪರಿಚಯ ನನಗೆ ಇರುವುದಿಲ್ಲ. ವಾದಿ, ಪ್ರತಿವಾದಿ 1 ರವರಿಗೆ ರೂ. 5 ಲಕ್ಷ ಹಣವನ್ನು ನಮ್ಮ ಮನೆಯಲ್ಲಿ ನೀಡಿರುವ ಬಗ್ಗೆ ಮತ್ತು ನಾನು ಕೈಗಡ ಪತ್ರ ನೋಡಿದ ಬಗ್ಗೆ ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಈ ಕೈಗಡ ಪತ್ರದ ಮೇಲೆ ಭೀಮಶಿ ಅಂಬಿಗೇರ, ವಿಠಲ ಪೂಜಾರಿ, ಇನ್ನೊಂದಿಬ್ಬರು ವ್ಯಕ್ತಿಗಳು ಸಹಿ ಮಾಡಿರುವರು. ಈ ಹಣವನ್ನು ಬಾಂಡ ಬರೆಸಿಕೊಂಡ ನಂತರ ನೀಡಿರುವರು. ದಸ್ತೂರು ಬರಹಗಾರನ ಹೆಸರು ನನಗೆ ಹೇಳಲು ಬರುವುದಿಲ್ಲ. ವಾದಿಯು ನನ್ನ ಸಮಕ್ಷಮದಲ್ಲಿ ಪ್ರತಿವಾದಿ 1 ರವರಿಗೆ ಬಾಂಡ ಬರೆಸಿಕೊಂಡು ರೂ. 5 ಲಕ್ಷ ಹಣ ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ವಾದಿಯು ಪ್ರತಿವಾದಿಯರಿಗೆ ರೂ. 5 ಲಕ್ಷ ಹಣ ನೀಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿಗೆ ಹಣ ನೀಡಿರುವ ಸಂಗತಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

4. ನಿಪಿ 5 ರ ದಾಖಲೆಯನ್ನು ಪ್ರತಿವಾದಿ 1 ಮತ್ತು 2 ರವರು ವಾದಿಗೆ ಬರೆದುಕೊಟ್ಟಿರುವರು. ಆದರೆ ಆ ದಾಖಲೆಯನ್ನು ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ಬರೆದುಕೊಟ್ಟಿರುವುದಿಲ್ಲ, ರೂ. 5 ಲಕ್ಷ ಹಣದ ಭದ್ರತೆಗಾಗಿ ಬರೆದುಕೊಟ್ಟಿರುವರು. ಈ ದಾಖಲೆಯಲ್ಲಿ ಕೈಗಡ ಪತ್ರ ಅಂತ ಬರೆದಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಮಾರಾಟ ಮಾಡುವ ಉದ್ದೇಶದಿಂದಲೇ ಪ್ರತಿವಾದಿ 1 ಮತ್ತು 2 ರವರು ವಾದಿಗೆ ಸಾಕ್ಷಿದಾರರ ಸಮಕ್ಷಮದಲ್ಲಿ ಬರೆದುಕೊಟ್ಟಿರುವರು ಎಂದರೆ ಸರಿಯಲ್ಲ. ದಾವಾ ಆಸ್ತಿ ಮಾರಾಟ ಮಾಡುವ ಉದ್ದೇಶದಿಂದಲೇ ನಿಪಿ 5 ರ ದಾಖಲಾತಿ ಬರೆದುಕೊಟ್ಟಿದ್ದರೂ ಸಹಿತ ನಾನು ಪ್ರತಿವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ

ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

5. ದಿಃ 10.06.2021 ರ ಕರಾರು ಪತ್ರವನ್ನು ನಾನು ನೋಡಿರುವುದಿಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 8 ರಲ್ಲಿ ಹೇಳಿ ಬರೆಸಿರುವ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 10.06.2021 ರ ಖರೀದಿ ಕರಾರು ಪತ್ರವನ್ನುಸಹ ನಾನು ನೋಡಿರುವೆನು. ಆ ದಾಖಲೆಯನ್ನು ಯಾರು ಬರೆದುಕೊಟ್ಟಿರುವರು ಎಂದು ನನಗೆ ಮಾಹಿತಿ ಇರುವುದಿಲ್ಲ. ಮೊದಲನೇಯ ಖರೀದಿ ಕರಾರು ಪತ್ರ ರೂ. 5 ಲಕ್ಷ, 2 ನೇ ದಾಖಲಾತಿ ರೂ. 10 ಲಕ್ಷದ್ದಾಗಿರುವುದು. ಈ ಸಂಗತಿಗಳು ನನಗೆ ದಾಖಲೆಗಳನ್ನು ನೋಡಿದ ಮೇಲೆ ಗೊತ್ತಾಗಿರುವುದು. ಮೊದಲನೇಯ ಖರೀದಿ ಕರಾರು ಪತ್ರದ ಮೇಲೆ ಸಾಕ್ಷಿದಾರರು ಅಂತ ವಿಠಲ ಪೂಜಾರಿ, ಭೀಮಶಿ ಅಂಬಿಗೇರ ಎಂಬುವವರು ಸಹಿ ಮಾಡಿರುವರು. ಇನ್ನು ಇಬ್ಬರು ವ್ಯಕ್ತಿಗಳು ಇದ್ದರು ಅವರ ಪರಿಚಯ ನನಗೆ ಇರುವುದಿಲ್ಲ. ಆ ದಾಖಲೆಯನ್ನು ಯಾರು ಬರೆದಿರುವರು ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ಖರೀದಿ ಪತ್ರವನ್ನು ಸಹ ಯಾರು ಬರೆದಿರುವರು ಎಂದು ಸಹ ನನಗೆ ಗೊತ್ತಿರುವುದಿಲ್ಲ.

6. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 9 ರಲ್ಲಿ ಬರೆಸಿ ಹಾಕಿರುವ ಸಂಗತಿಗಳು ನಿಜವಿರುವವು. ಈ ಸಂಗತಿ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದರಿಂದ ಹೇಳಿ ಬರೆಸಿರುವೆನು. ಪ್ರತಿವಾದಿಯರು ವಾದಿಗೆ ಹಣ ನೀಡಿದ ದಿನಾಂಕ ನನಗೆ ನೆನಪಿರುವುದಿಲ್ಲ. ಈ ಹಣವನ್ನು ನೀಡಿದಾಗ ಸಮಯ ಸುಮಾರು ಮ. 2-3 ಗಂಟೆಯಾಗಿರಬಹುದು. ಈ ಹಣವನ್ನು ಪೆಟ್ಲೂರಿನ ನನ್ನ ಮನೆಯಲ್ಲೇ ವಾದಿಗೆ ನೀಡಿರುವೆವು. ಈ ಹಣ ನೀಡಿ ಸುಮಾರು 4-5 ವರ್ಷವಾಗಿರುವುದು. ಅಸಲ ,ಬಡ್ಡಿ ಕೂಡಿಸಿ ರೂ. 10 ಲಕ್ಷ ಕ್ಕಿಂತಲೂ ಹೆಚ್ಚಿಗೆ ಮೊತ್ತವಾಗಿತ್ತು, ಆದರೆ ರೂ. 10 ಲಕ್ಷ ಹಣವನ್ನು ವಾದಿಗೆ ನೀಡಿರುವರು. ಈ ಮೇಲಿನ ಸಂಗತಿಯನ್ನುನಾನು ಸಂಪೂರ್ಣವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೂ. 10 ಲಕ್ಷ ಹಣ ನೀಡಿದ ಬಗ್ಗೆ ಕೈಗಡ ಖರೀದಿ ಕರಾರು ಪತ್ರವನ್ನು ರದ್ದು ಪಡಿಸುವ ದಾಖಲೆಯನ್ನು ಬರೆದುಕೊಂಡಿರುವರು. ಈ ರೂಾ. 10 ಲಕ್ಷ ಹಣ ಪ್ರತಿವಾದಿಯರ ಮನೆಯಲ್ಲಿ ಇದ್ದು ಆ ಹಣವನ್ನು ವಾದಿಗೆ ನೀಡಿರುವರು.

7. ದಾವಾ ಆಸ್ತಿ ಪ್ರತಿವಾದಿ 1 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿ ಪ್ರತಿವಾದಿ 1 ರವರ ಹೆಸರಿನಲ್ಲಿ ಅವರ ತಂದೆ ಖರೀದಿ ಮಾಡಿರುವಂತಹ ಆಸ್ತಿಯಾಗಿರುವುದು. ಮೊದಲಿನ ಖರೀದಿ ಕರಾರು ಪತ್ರದಲ್ಲಿ ಪ್ರತಿವಾದಿ 1 ವಿನ ಹೆಂಡತಿಯ ಸಹಿ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಪ್ರತಿವಾದಿ 1 ರವರ ಹೆಂಡತಿಯ ಸಹಿಯನ್ನು ಪಡೆದುಕೊಂಡು 2ನೇ ಖರೀದಿ ಕರಾರು ಪತ್ರವನ್ನು ಮಾಡಿಕೊಂಡಿರುವರು ಎಂದರೆ ಸರಿ. ವಾದಿ ಪ್ರತಿವಾದಿಯರಿಗೆ ಖರೀದಿ ಕರಾರು ಪತ್ರ ನೊಂದಣಿ ಮಾಡಿಕೊಡುವಂತೆ ಹೇಳಿ ನೋಟಿಸು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ನುಡಿಯುವುದೇನೆಂದರೆ ವಾದಿ ನೋಟಿಸು ನೀಡಿರುವುದಿಲ್ಲ ಎಂದು ನುಡಿಯುವರು. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿಗೆ ರೂ. 10 ಲಕ್ಷ ನೀಡಿದ ಬಗ್ಗೆ ಹೇಳಿ ಬರೆಸಿರುವೆನು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದರೆ ನಮ್ಮ ಮನೆಯಲ್ಲಿ ನೀಡಿದ ಬಗ್ಗೆ ಹೇಳಿ ಬರೆಸಿರುವುದಿಲ್ಲ. ಪ್ರತಿವಾದಿ 1 ರವರಿಗೆ ಸಹಾಯ ಮಾಡುವ ಸಲುವಾಗಿ ನಾನು ಖೊಟ್ಟಿ ರೀತಿಯಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರ ನೊಂದಣಿ ಮಾಡಿಕೊಡುವಂತೆ ವಾದಿ ವಿನಂತಿಸಿಕೊಂಡಿದ್ದರೂ ಸಹಿತ ಪ್ರತಿವಾದಿ ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಆಗಿರುವಂತ ಲಿಖಿತ ದಾಖಲೆಗಳಲ್ಲಿ ನಾನು ಸಾಕ್ಷಿದಾರ ಅಂತ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಈ ಕಾರಣಕ್ಕೆ ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಹಣವನ್ನು ಎತ್ತಿ ಹಾಕುವ ಸಲುವಾಗಿ ನಾನು ಪ್ರತಿವಾದಿಯರ ಪರವಾಗಿ ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ